INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -4, July-August, 2023,
PageNo,01-08
Peer -Reviewed, Refereed Journal

# "ಕೆ.ಎನ್.ವಿ.ಶಾಸ್ತ್ರೀಯವರ ಬರವಣಿಗೆಯಲ್ಲಿ ಮಾರ್ಕ್‌ಕಬ್ಬನ್ನನ ಆಡಳಿತದ ಪೊಲೀಸ್ ವ್ಯವಸ್ಥೆ"

**ದಿನೇಶ ವಿ.**[1]

ಕ್ರಿ.ಶ.1830–31ರ ಅವಧಿಯ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಗಲಭೆ, ಗದ್ದಲಗಳು, ಅಶಾಂತಿ ಇತ್ಯಾದಿಗಳನ್ನು ನೆಪ ಮಾಡಿಕೊಂಡು ಲಾರ್ಡ್‌ವಿಲಿಯಂ ಬೆಂಟಿಕ್ ಈ ಕುರಿತು ಅಧ್ಯಯನ ಮಾಡುವುದಕ್ಕಾಗಿಯೇ 4 ಜನ ಅಧಿಕಾರಿಗಳ ನಿಯೋಗ ಒಂದನ್ನು ರಚಿಸಿದರು. ಈ ನಿಯೋಗದಲ್ಲಿ ಮಾರ್ಕ್‌ಕಬ್ಬನ್ನನ್ ಕೂಡ ಒಬ್ಬರು ಕ್ರಿ.ಶ.1831 ಅಕ್ಟೋಬರ್ 19 ರಂದು ಬ್ರಿಟಿಷ್ ಸರ್ಕಾರ ಮೈಸೂರು ಸಂಸ್ಥಾನವನ್ನು ನೇರ ಆಳ್ವಿಕೆಗೆ ಒಳಪಡಿಸಿತು. ಮಹಾರಾಜರ ಹೆಸರಿನಲ್ಲಿ ಇದು ಆಡಳಿತವನ್ನು ನಡೆಸಲು ಆರಂಭಿಸಲಾಯಿತು. ಇದನ್ನು "ಮೈಸೂರು ಕಮೀಷನ್" ಎಂತಲೂ ಕರೆಯುತ್ತಾರೆ.[1] ಹೀಗೆ ಕಮೀಷನ್‌ನನ್ನು ಜಾರಿ ಮಾಡಲಾಯಿತು. ಇದರ ಪರಿಣಾಮವಾಗಿ ಕ್ರಿ.ಶ.1834ರಲ್ಲಿ ಮಾರ್ಕ್‌ಕಬ್ಬನ್‌ರವರು ಏಕಮಾತ್ರ ಕಮೀಷನರಾಗಿ ನೇಮಕಗೊಂಡರು.

ಮಾರ್ಕ್‌ಕಬ್ಬನ್ನನ ಆಳ್ವಿಕೆಯ ದಕ್ಷತೆ, ಅಭಿವೃದ್ಧಿಯ ದೂರದೃಷ್ಟಿ ಕೋನವನ್ನು ಈಸ್ಟ್ ಇಂಡಿಯಾ ಕಂಪನಿ ಮತ್ತು ಬ್ರಿಟಿಷ್ ಸರ್ಕಾರದ ಮೇಲೆ ಅವನಿಗಿದ್ದ ಅಪಾರವಾದ ಗೌರವವನ್ನು 'The Administation of Mysore under sir Mark Cubban' ಎಂಬ ಗ್ರಂಥದಲ್ಲಿ ಮಾನ್ಯ ಶ್ರೀ ಕೆ.ಎನ್. ವೆಂಕಟಸುಬ್ಬಶಾಸ್ತ್ರೀಯವರು ವಿವರವಾಗಿ ವಿಶ್ಲೇಷಿಸಿದ್ದಾರೆ.

ಮಾರ್ಕ್‌ಕಬ್ಬನ್ನನ ಆಳ್ವಿಕೆಯ ಕಾಲದಲ್ಲಿ ಅಸ್ತಿತ್ವದಲ್ಲಿದ್ದ 9 ಇಲಾಖೆಗಳಲ್ಲಿ ಪೊಲೀಸ್ ಇಲಾಖೆಯೂ ಒಂದಾಗಿದೆ. 1834ರ ಮೊದಲು ಮೈಸೂರಿನಲ್ಲಿ ಯಾವುದೇ ಕಾವಲುಗಾರರು ಇರಲಿಲ್ಲ. ಕಂದಾಚಾರ ಎಂದು ಕರೆಯಲ್ಪಡುವ ಶಸ್ತ್ರಸಜ್ಜಿತ ಕಾಲಾಳುಗಳು ಪೊಲೀಸ್ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.[2] ಅಂದರೆ ಇವರು ಪೊಲೀಸರ ಜೊತೆ ಸೇರಿ ಕೆಲಸಗಳನ್ನು ನಿರ್ವಹಿಸುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ.

[1] **ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ,ಮಾನಸ ಗಂಗೋತ್ರಿ,ಮೈಸೂರು.**

ಕಾಲಾಳುಗಳು ಪ್ರಮುಖ ಸಂದರ್ಭಗಳಲ್ಲಿ ಮಿಲಿಟರಿ ಕರ್ತವ್ಯಕ್ಕೆ ಪದಾತಿಗೆ ಸೇರುತ್ತಿದ್ದರು. ಈ ಪದಾತಿ ದಳವು ಪೊಲೀಸ್ ಕರ್ತವ್ಯದಲ್ಲಿ ಸಹಾಯ ಮಾಡುತ್ತದೆ ಎಂಬುದಾಗಿ ಹೇಳಬಹುದಾಗಿದೆ. ಕಂದಾಚಾರವನ್ನು ತಾತ್ಕಾಲಿಕವಾಗಿ ಮಿಲಿಟರಿ ಇಲಾಖೆಗೆ ವರ್ಗಾಯಿಸಿದಾಗಲೆಲ್ಲಾ ಕಾಲಾಳುಗಳು ಬಿಟ್ಟು ಹೋದ ಪೊಲೀಸ್ ಸ್ಥಾನಗಳನ್ನು ತಾತ್ಕಾಲಿಕ ನೇಮಕಾತಿಗಳಿಂದ ತುಂಬಿಸಲಾಯಿತು.[3] ಹೀಗೆ ವಿಳಂಬ ಮಾಡದೇ ಆದಷ್ಟು ಬೇಗನೇ ಕಾರ್ಯ ನಿರ್ವಹಿಸುತ್ತಿದ್ದನು.

ದೈನಂದಿನ ಶಿಸ್ತು ಮತ್ತು ಕಾನೂನು ಪರಿಪಾಲನೆ ದೃಷ್ಟಿಯಿಂದ ಸ್ಥಾಪಿತವಾಗಿದ್ದ ಕಂದಾಚಾರ ಇಲಾಖೆಯ ಸೈನ್ಯಾಡಳಿತ ಇಲಾಖೆಗೆ ಒಳಪಡೆದೇ ಪ್ರತ್ಯೇಕ ಸ್ವಾಯತ್ತ ಇಲಾಖೆಯಾಗಿದ್ದು, ಕಮೀಷನರ ನೇರ ಆಳ್ವಿಕೆಗೆ ಒಳಪಡುವಂತಿತ್ತು ಮತ್ತು ಮಿಲಿಟರಿ ಸೇವೆಯ ನೇಮಕಾತಿಗೆ ಅರ್ಹತೆಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ದೈಹಿಕವಾಗಿ ಆರೋಗ್ಯವಂತವಾದ ವ್ಯಕ್ತಿಗಳು ಆಯ್ಕೆಯಾಗಿ ಇರಬೇಕು ದೃಢವಾದ, ಕೆಚ್ಚೆದೆಯ ಮತ್ತು ವಿಶ್ವಾಸಾರ್ಹ ಮಿಲಿಟರಿ ವರ್ಗಗಳಿಂದ ಮಾತ್ರ ತೆಗೆದುಕೊಳ್ಳಬೇಕು ಎಂಬುದಾಗಿ ಕಟ್ಟುನಿಟ್ಟಾಗಿ – ವ್ಯವಸ್ಥೆಯನ್ನು ರೂಪಿಸಿದ್ದನು. ಅಸಮರ್ಥ ಪುರುಷರು, ಕೆಟ್ಟಸ್ವಭಾವ, ಅಭ್ಯಾಸದ ಅಲಸ್ಯ ಅಥವಾ ದೈಹಿಕ ದೌರ್ಬಲ್ಯಗಳಿಂದಾಗಿದ್ದರೆ ಅದನ್ನು ನೇಮಿಸಿಕೊಂಡ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ. ಅವರಿಗೆ ಸಂದಾಯ ಮಾಡಿದ ಯಾವುದೇ ವೇತನವನ್ನು ಮರುಪಾವತಿಸಲು ಒತ್ತಾಯಿಸಲಾಗುತ್ತದೆ.[4] ಹೀಗೆ ಕ್ರಿಯಾಶೀಲವಾಗಿರುವ ಸಮರ್ಥರನ್ನು ಆಯ್ಕೆ ಮಾಡಿಕೊಂಡಿರುವುದು ಸ್ಪಷ್ಟವಾಗಿ ಕಾಣಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಕಾಲಾಳುಗಳನ್ನು 2 ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳನ್ನು ಈ ಕೆಳಕಂಡಂತೆ ತಿಳಿಸಿರುವರು.

ಶಸ್ತ್ರ ಸಜ್ಜಿತ ಕಾಲಾಳುಗಳು ಮತ್ತು ಖಾಲಿಹತ್ (ಬರಿಗೈ) ಈ ವಿಭಾಗವನ್ನು ಕೋಡ್‌ನಲ್ಲಿ ತಿಳಿಸಿರುವರು ಮತ್ತು ಅದಕ್ಕನುಗುಣವಾಗಿ ಈ ಕೆಳಗಿನ ಕರ್ತವ್ಯಗಳನ್ನು ವ್ಯಾಖ್ಯಾನಿಸಲಾಗಿದೆ.[5] ಶಸ್ತ್ರಸಜ್ಜಿತ ಕಾಲಾಳುಗಳು (Armedpeoṇ) ಈ ಕೆಳಗಿನವುಗಳನ್ನು ಮಾಡಬೇಕೆಂದು ನಿರೀಕ್ಷಿಸಲಾಗಿತ್ತು.

1) ಸರಕಾರದ ಹಣವನ್ನು ಸಾಗಿಸುವಾಗ, ಕಾರಗೃಹಗಳಲ್ಲಿ ಇರುವಂತಹ ಕೈದಿಗಳನ್ನು ಒಂದು ಜೈಲಿನಿಂದ ಮತ್ತೊಂದು ಜೈಲಿಗೆ ಕರೆದುಕೊಂಡು ಹೋಗುವಾಗ ರಕ್ಷಕರಾಗಿ ಮತ್ತು ಜೈಲುಗಳ ಕಾವಲುಗಾರರ ಸೇವೆ ಸಲ್ಲಿಸಬೇಕಾಗಿತ್ತು.
2) ಕ್ಷೇತ್ರದ ಸೇವೆಗಾಗಿ ದುಡಿಯಲು, ಸಶಸ್ತ್ರಪಡೆ ಸದಾ ಸಿದ್ಧರಾಗಿರಬೇಕು.
3) ಕೆಲವು ಸಂದರ್ಭಗಳಲ್ಲಿ ಭೇಟಿಯಾಡಲು ಶಿಕಾರಿ ಹೋದಾಗ ಹುಲಿಗಳನ್ನು ಭೇಟಿಯಾಡಿದರೆ ತಲಾ 10 ರೂ. ಸಂಭಾವನೆ ಮತ್ತು ಮರಿಗಳಿಗೆ 5 ರೂ. ಸಂಭಾವನೆ ದೊರೆಯುತ್ತಿತ್ತು.

4) ಅವರ ಕ್ಷೇತ್ರದಲ್ಲಿ ಇರುವಂತಹ ಅತಿಥಿಗಳೊಂದಿಗೆ ಸಂಚರಿಸಬೇಕಾಗಿತ್ತು. ಎಲ್ಲಾ ಸಶಸ್ತ್ರ ಪಡೆದವರಿಗೆ ನಿರ್ದಿಷ್ಟವಾದ ಗ್ರಾಮಗಳು ಇರುತ್ತಿದ್ದವು. ನಿಯೋಜಿಸಲಾದ ಹಳ್ಳಿಗಳ ಸಹಕಾರದೊಂದಿಗೆ ಕೆಲಸವನ್ನು ನಿರ್ವಹಿಸಲಾಗುತ್ತಿತ್ತು.
5) ಕಳ್ಳತನವನ್ನು ತಡೆಗಟ್ಟುವುದು, ಅಪರಾಧಿಗಳನ್ನು ಪತ್ತೆಹಚ್ಚುವುದು, ತೋಟಿ ಮತ್ತು ತಳವಾರ ಕರ್ತವ್ಯಗಳನ್ನು ಆಗಾಗ್ಗೆ ಗಮನಿಸುತ್ತಿರುವುದು.
6) ತೋಟಿಸ್ ಮತ್ತು ತಳವಾರ ಸಹಾಯದಿಂದ ಕಾಡಿನ ಮೂಲಕ ಸಾಗು ಎಲ್ಲಾ ಕಿರುದಾರಿಗಳು, ರಸ್ತೆಗಳು ಮತ್ತು ಮಾರ್ಗಗಳನ್ನು ವೀಕ್ಷಿಸುವುದು.
7) ರಾತ್ರಿ ವೇಳೆಯಲ್ಲಿ ಕೋಟೆಗಳು ಮತ್ತು ಪ್ರಮುಖ ಪಟ್ಟಣಗಳನ್ನು ಕಾಯುವುದು.
8) ಗಂಧದ ಮರಗಳನ್ನು ರಹಸ್ಯವಾಗಿ ಕಡಿಯುವುದನ್ನು ತಡೆಯಲು ಅವುಗಳ ಮೇಲೆ ನಿಗಾ ಇಡುವುದು. ಮರವನ್ನು ಸ್ವಚ್ಛಗೊಳಿಸುವಾಗ ಮತ್ತು ವರ್ಗೀಕರಿಸುವಾಗ ಹಾಜರಿರಬೇಕು ಮತ್ತು ಅದನ್ನು ಅಮಿಲ್‌ಗೆ ವರದಿ ಮಾಡುವುದು.

ನಿಶಸ್ತ್ರಪಡೆಯವರು ಕೂಡಾ ಆದೇಶಿಸಿದ ಕೆಲಸಗಳನ್ನು ಮಾಡಬೇಕಾಗಿತ್ತು. ರಸ್ತೆಗಳು ಟ್ಯಾಂಕ್‌ಗಳು ಮತ್ತು ಇತರ ಸರ್ಕಾರದ ಕೆಲಸಗಳ ದುರಸ್ತಿಯಲ್ಲಿ ಕೆಲಸ ಮಾಡಲು ಅನುಮತಿಸಿತು. ಆದರೆ ಇವರನ್ನ ಕ್ಷೇತ್ರ ಸೇವೆಯಲ್ಲಿ ಉಪಯೋಗಿಸಬಾರದು ಎಂದು ಹೇಳಲಾಗಿತ್ತು.[6] ತಾಲ್ಲೂಕಿನ ಪ್ರತಿಯೊಂದು ಹೋಬಳಿಯಲ್ಲಿ ಇಬ್ಬರು ಕಾಲಾಳುಗಳನ್ನು ನಿಯೋಜಿಸಬೇಕು ಹಾಗೂ ಕೋಟೆಗಳು ಪ್ರಮುಖ ನಿಲ್ದಾಣಗಳಲ್ಲಿ ಸರಿಯಾದ ಸಂಖ್ಯೆಯ ಕಾಲಾಳುಗಳು ಇರಬೇಕೆಂದು ತಿಳಿಸಿತು. ಇನ್ನು ನಗರ ಪ್ರದೇಶದಲ್ಲಿನ ಕೋಟೆ, ಕಛೇರಿಗಳನ್ನು ಕಾಯಲು ಅವಶ್ಯಕತೆಗನುಣವಾಗಿ ಸಿಬ್ಬಂದಿಯನ್ನು ನೇಮಿಸಲಾಗುತ್ತಿತ್ತು. ಈ ಪೊಲೀಸರಿಗೆ ಕತ್ತಿಗಳನ್ನು ಅರಣ್ಯ ಗಡಿದಾರಿಗಳಲ್ಲಿನ ಕಾವಲುಗಾರರಿಗೆ ಕೋವಿಗಳನ್ನು ಸಹ ನೀಡಲಾಗುತ್ತಿತ್ತು. ಕೋವಿಗಳಿಗೆ ಬೇಕಾದ ಬೆಂಕಿ ಕಡ್ಡಿ ಮತ್ತು ಮದ್ದುಗುಂಡನ್ನು ಸರ್ಕಾರದಿಂದಲೇ ಪೂರೈಸಲಾಗುತ್ತಿತ್ತು[7] ಎಂಬುದನ್ನು ನಾವು ಇವರ ಬರಹಗಳಿಂದ ತಿಳಿಯಬಹುದು. ಪ್ರತಿ ತಾಲ್ಲೂಕಿನಲ್ಲಿ ನಿಯಮಿತ ಪೊಲೀಸರನ್ನು ಅಮಲ್ದಾರ್‌ರ ಅಡಿಯಲ್ಲಿ ಇರಿಸಲಾಯಿತು. ಅಮಲ್ದಾರ್‌ನಿಗೆ ಒಬ್ಬ ಖಿಲ್ಲೇದಾರ್, ಒಬ್ಬ ನಯೀಬ್ ಖಿಲ್ಲೇದಾರ ಅಥವಾ ದಫೇದಾರ ಹಾಗೂ ಠಾಣಾದಾರ ಅಥವಾ ಹೋಬಳಿದಾರನನ್ನು ನೇಮಿಸಲಾಯಿತು.[8]

ಅಮಲ್ದಾರನು ಇವರಿಗೆ ಮುಖ್ಯ ಅಧಿಕಾರಿಯಾಗಿದ್ದನು. ಇವನು ಭಕ್ಷಿಯ ಮೂಲಕವಾಗಿ ತನ್ನ ಅಹವಾಲುಗಳನ್ನು ಒಪ್ಪಿಸುತ್ತಿದ್ದನು. ಕಮೀಷನರಿಗೆ ಕಂದಚಾರ ಇಲಾಖೆಯ ಎಲ್ಲಾ ಕೆಳವರ್ಗದ ಅಧಿಕಾರಿಗಳನ್ನು ನಿಯಂತ್ರಿಸುವ ಅಧಿಕಾರವನ್ನು 1841 ರಲ್ಲಿ ನೀಡಲಾಯಿತು.[9] ಅಮಲ್ದಾರನು

ಕೂಡಾಪೊಲೀಸ್ ಕಮೀಷನರ್ ಅಧೀನದಲ್ಲಿಯೇ ಕೆಲಸ ಮಾಡಬೇಕಾಗಿದ್ದಿತು. ಅಮಲ್ದಾರನ ಕರ್ತವ್ಯಗಳನ್ನು ಈ ಕೆಳಗಿನಂತೆ ನೋಡುವುದಾದರೆ.

1. ಪೊಲೀಸ್ ಸಿಬ್ಬಂದಿ (Peon) ಸವಲತ್ತುಗಳನ್ನು ರಕ್ಷಿಸಲು.
2. ತನ್ನ ಅಧೀನ ಅಧಿಕಾರಿಗಳ ಕೆಲಸವನ್ನು ನಿಯಂತ್ರಿಸಲು.
3. ಪೊಲೀಸ್ ಸಿಬ್ಬಂದಿ ವಿರುದ್ಧದ ದೂರುಗಳನ್ನು ತನಿಖೆ ಮಾಡಲು.
4. ಪ್ರತಿ ಪೊಲೀಸ್ ಅಧಿಕಾರಿ ಹಾಗೂ ಪೊಲೀಸ್ ಸಿಬ್ಬಂದಿ(ಪೇದೆ) ಗೆ ಸಂಬಂಧಿಸಿದ ಲೆಕ್ಕ ಪತ್ರಗಳನ್ನು ಪೊಲೀಸ್ ಕಮೀಷನರ್‌ಗೆ ತಿಳಿಸುವುದು.
5. ಪೊಲೀಸ್ ಸಿಬ್ಬಂದಿಗೆ ಎಂಟು ದಿನಗಳಿಗಿಂತ ಹೆಚ್ಚು ರಜೆ ನೆಡೆಸುವುದು.
6. ಎರಡು ಸಾವಿರ ಪಗೋಡಗಳಿಗೆ ಇಬ್ಬರು ಪೊಲೀಸರನ್ನು ಭೂಕಂದಾಯ ವಸೂಲಾತಿಯಲ್ಲಿ ನೇಮಿಸುವುದು ಮತ್ತು ಒಂದು ಬಾರಿಗೆ ಒಬ್ಬ ಪೇದೆ ಮೂರು ತಿಂಗಳ ಅವಧಿಗಿಂತ ಹೆಚ್ಚಿಗೆ ಕಂದಾಯ ಇಲಾಖೆಯಲ್ಲಿ ಇರುವಂತಿಲ್ಲ. ಒಟ್ಟು ವರ್ಷದಲ್ಲಿ ಆರು ತಿಂಗಳಿಗಿಂತ ಹೆಚ್ಚಿಗೆ ಆ ಇಲಾಖೆಯಲ್ಲಿರುವ ಹಾಗಿಲ್ಲ.
7. ಸೂಪರಿಟೆಂಡೆಂಟ್ (ಅಧೀಕ್ಷಕರ) ಆದೇಶಗಳನ್ನು ತಿಳಿಸಲು ನೆರವಾಗುವುದು.
8. ಸುತ್ತವರಿದು ಬೆಳೆಯಲ್ಪಟ್ಟ ಬೇಲಿಗಳನ್ನು ಸರಿಪಡಿಸಲು ಗ್ರಾಮಸ್ಥರನ್ನು ಪ್ರೋತ್ಸಾಹಿಸುವುದು.
9. ಬಿಡುಗಡೆಯಾಗುವ ಅಪರಾಧಿಗಳು, ಶಂಕಿತರು ಮತ್ತು ಇತರರ ಪಟ್ಟಿಯನ್ನು ತರಿಸಿಕೊಳ್ಳುವುದು ಮತ್ತು ಪ್ರತಿ ಸಂಜೆ ಅವರು ಅವರ ಹಳ್ಳಿಯ ಪೊಲೀಸ್ ಠಾಣೆಯಲ್ಲಿ ಅವರನ್ನು ವರದಿ ದೂಡುವಂತೆ ತಿಳಿಸುವುದು.
10. ಕ್ರಿಮಿನಲ್ ಸಮುದಾಯಗಳಾದ ಕೊರಮರು, ಲಂಬಾಣಿಗಳು ಮತ್ತು ವಡ್ಡರುಗಳು ತಮ್ಮ ಅಪರಾಧಿ ಮನೋಭಾವಗಳಿಂದ ಗ್ಯಾರಂಟಿ ಪತ್ರವನ್ನು ಪಡೆದು ಅವರನ್ನು ಸರಿದಾರಿಗೆ ತರುವಲ್ಲಿ ಶ್ರಮಿಸುವುದು.
11. ಖೈದಿಗಳ ಬಟವಾಡೆ ಪಾವತಿಸಲು.
12. ಕದ್ದ ವಸ್ತುಗಳನ್ನು ಹಿಡಿದಿಟ್ಟುಕೊಳ್ಳುವುದು.
13. ಗ್ಯಾಂಗ್‌ಗಳ ಚಲನವಲನ ಪರಾರಿಯಾಗಿರುವ ಕಳ್ಳರ ಜಾಡು ಇತ್ಯಾದಿಗಳ ಬಗ್ಗೆ ಹಾಗೂ ಸಂವಹನಕ್ಕಾಗಿ ಪಕ್ಕದ ತಾಲ್ಲೂಕುಗಳ ಅಮಲ್ದಾರರೊಂದಿಗೆ ಸಂಬಂಧ ಬೆಳೆಸುವುದು.
14. ಹೆಂಡ ಮತ್ತು ಸಾರಾಯಿಯ ದಾಸ್ತಾನಿನ ಮೇಲೆ ಕೂಲಂಕುಷವಾಗಿ ವಿಚಾರಣೆ ಮಾಡುವುದು ಮತ್ತು ವರದಿಗಳನ್ನು ತಯಾರಿಸುವುದು.
15. ಶ್ರೀಗಂಧದ ಮರಗಳ ಬಗ್ಗೆ ವರದಿಯನ್ನು ಕಳುಹಿಸುವುದು ಅಥವಾ ತಿಳಿಸುವುದು.

ಅಮಲ್ದಾರರಿಗೆ ಮೇಲೆ ತಿಳಿಸಿರುವಂತಹ ಕರ್ತವ್ಯಗಳ ಆದೇಶ ಪಾಲಿಸಲು ಸಹಾಯಕನಾಗಿ ಒಬ್ಬ ಶಿರಸ್ತೇದಾರ, ಗುಮಾಸ್ತನನ್ನು ನೀಡಲಾಗುತ್ತಿತ್ತು. ಅಮಲ್ದಾರನೇ ಈ ಮೇಲಿನ ಎಲ್ಲಾ ಕಾರ್ಯಗಳನ್ನು ತನ್ನ ಅಧೀನ ಸಿಬ್ಬಂದಿಗಳ ನೆರವಿನಿಂದ ನಡೆಸಬೇಕಾಗಿತ್ತು. ಅಮಲ್ದಾರನ ಪಾತ್ರವು ಅಂದಿನ ಜನ–ಜೀವನದಲ್ಲಿ ಬಹುಮುಖ್ಯವಾಗಿತ್ತು. ಅಪರಾಧಿಗಳಿಗೆ ಕಡ್ಡಾಯವಾಗಿ ಕಠಿಣ ಶಿಕ್ಷೆಯಾಗುವುದು ಮತ್ತು ನಿರಪರಾಧಿಗಳಿಗೆ ಯಾವುದೇ ಸಂದರ್ಭದಲ್ಲೂ ಶಿಕ್ಷೆಯಾಗುವುದನ್ನು ತಪ್ಪಿಸಲು ಎಲ್ಲಾ ರೀತಿಯ ವ್ಯವಸ್ಥಿತ ಸೂತ್ರಗಳನ್ನು ಅಮಲ್ದಾರನ್ನು ಸಿದ್ಧಪಡಿಸಿಟ್ಟುಕೊಳ್ಳಬೇಕಾಗಿತ್ತು. ಇದು ಪೊಲೀಸ್ ವ್ಯವಸ್ಥೆ (ಹುಕುಂನಾಮಾ)ದ ಮುಖ್ಯವಾದ ಭಾಗವಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.

ಶಸ್ತ್ರಜ್ಜಿತ ಕಾಲಾಳುಗಳನ್ನು ನೇಮಕ ಮಾಡಿಕೊಂಡಿರುವಂತಹವರನ್ನು ಗೃಹ ಉದ್ದೇಶಗಳಿಗಾಗಿ ಅಥವಾ ಅವರ ಖಾಸಗಿ ವ್ಯವಹಾರಗಳಿಗೆ ಬಳಸಿಕೊಳ್ಳಲು ಅನುಮತಿಸುವುದಿಲ್ಲ ಮತ್ತು ಈ ನಿಯಮದ ಯಾವುದೇ ಉಲ್ಲಂಘನೆಯು ಅಪರಾಧ ವ್ಯಕ್ತಿಗಳನ್ನು ದಂಡ ಮತ್ತು ಕಛೇರಿಯಿಂದ ವಜಾಗೊಳಿಸುವುದಕ್ಕೆ ಒಳಪಟ್ಟಿರುತ್ತದೆ[10] ಎಂದು ಆದೇಶಿಸಲಾಯಿತು ಮತ್ತು ಈ ಸಿಬ್ಬಂದಿ ಅರ್ಧದಷ್ಟು ವೇತನದ ಮೊತ್ತದ ಜಮೀನುಗಳಿಗೆ ಅರ್ಜಿ ಸಲ್ಲಿಸಿದರೆ ಅವರ ಇಚ್ಚೆಗೆ ಅನುಗುಣವಾಗಿರಬೇಕು ಮತ್ತು ಭೂಮಿಯನ್ನು ಹೊಂದಿರದವರಿಗೆ ಅರ್ಧದಷ್ಟು ಹಣ ಮತ್ತು ಧಾನ್ಯವನ್ನು ಪಾವತಿಸಬೇಕು ಎಂದು ಕಟ್ಟುನಿಟ್ಟಾದ ಸುತ್ತೋಲೆ ಹೊರಡಿಸಿದ್ದನು. ಆ ಕಾಲದಲ್ಲಿ ದರೋಡೆ ಮಾಡಿ ಜೀವನ ಮಾಡುವುದು ಕೆಲವು ಜನಾಂಗದ ಕುಲಕಸುಬಾಗಿತ್ತು. ದರೋಡೆಕೋರರನ್ನು ನಿಯಂತ್ರಿಸುವುದು ಗ್ರಾಮದ ಮತ್ತು ನಗರ ಪ್ರದೇಶಗಳ ಜನರ ಆಸ್ತಿ–ಪಾಸ್ತಿಗಳನ್ನು ರಕ್ಷಣೆ ಮಾಡುವಂತಹದ್ದು ಒಂದು ರೀತಿಯ ಸ್ಪರ್ಧೆಯಾಗಿತ್ತು.

ಮೈಸೂರಿನಲ್ಲಿ ಸ್ವಲ್ಪ ದರೋಡೆ ಕೋರರಿದ್ದರು. ಆದರೆ ಹಲವಾರು ಪುಂಡರು ಬೆಂಗಳೂರು ಮತ್ತು ನಗರದಲ್ಲಿ ಸದ್ದಿಲ್ಲದೇ ವಾಸಿಸುತ್ತಿದ್ದರು. ಈ ದರೋಡೆಕೋರರ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿತ್ತು. ಪೊಲೀಸ್ ಇಲಾಖೆಗೆ ಹಲವಾರು ಸಮಸ್ಯೆಗಳು ಸವಾಲುಗಳಿರುತ್ತಿದ್ದವು. ಪ್ರಮುಖವಾದ ಸವಾಲೆಂದರೆ ಅಲೆಮಾರಿಗಳನ್ನು ನಿಯಂತ್ರಿಸುವುದು, ಈ ಅಲೆಮಾರಿಗಳು ನಿರಂತರ ಸಂಚಾರಿಗಳು, ಈ ಅಲೆಮಾರಿಗಳನ್ನು ಕ್ರಿಮಿನಲ್ ಹಿನ್ನೆಯಲ್ಲಿ ಬಂಧಿಸಿ ಕಸ್ಟಡಿಯಲ್ಲಿ ಇಡಬೇಕಿತ್ತು. ಇವರನ್ನು ಭದ್ರತೆ ಆಗುವವರೆಗೂ ತಮ್ಮ ವಶದಲ್ಲಿ ಇಟ್ಟುಕೊಳ್ಳುತ್ತಿದ್ದರು. ಇವರನ್ನು ಬಿಡಿಸಿಕೊಳ್ಳುವಾಗ 200 ರೂ. ಮೊತ್ತವನ್ನು ಕೊಟ್ಟು ಬಿಡಿಸಿಕೊಳ್ಳಬೇಕಾಗಿತ್ತು. ಈ ಕಾರ್ಯವನ್ನು ಮಾಡುವವರು ಉತ್ತಮನಾಗಿರಬೇಕು. ಅಲ್ಲದೇ ಕೆಳಮಟ್ಟದ ಪೊಲೀಸ್ ಅಧಿಕಾರಿಗೆ ಯಾವುದೇ ಅವಕಾಶವನ್ನು ನೀಡದಂತೆ, ಅಪರಾಧಿಯನ್ನು ತನಿಖೆ ನೆಪದಲ್ಲಿ ಪ್ರಜೆಗಳ ಪೀಡನೇ ಮಾಡಬಾರದೆಂದು ಕಟ್ಟಳೆಯಿದ್ದಿತು.[11] ಎಂಬುದನ್ನು ಶಾಸ್ತ್ರೀಯವರು ತಮ್ಮ ಬರವಣಿಗೆಯಲ್ಲಿ ಗುರುತು ಮಾಡಿದ್ದಾರೆ.

ಕಬ್ಬನ್ನನು ಸ್ವತಃ ಖಿಲ್ಲೇದಾರ, ಅಮಲ್‌ದಾರ ಮೊದಲಾದವರನ್ನು ನೇಮಿಸಿಕೊಳ್ಳುವ ಜವಬ್ದಾರಿಯನ್ನಿಟ್ಟುಕೊಂಡಿದ್ದರು. ಈ ಅಮಲದಾರರು, ಮತ್ತು ಖಿಲ್ಲೇದಾರರ ನಡುವೆ ಸಮಸ್ಯೆಗಳನ್ನು ತಲೆದೋರಿದಾಗ ಅದಾಗ್ಯೂ 1844ರಲ್ಲಿ ತನ್ನ ಸ್ವಂತ ಕಛೇರಿಗೆ ಸೇರಿದ ಅಧಿಕಾರಗಳನ್ನು ಖಿಲ್ಲೇದಾರರ ನೇಮಿಸುವ, ಬಡ್ತಿ ನೀಡುವ ಮತ್ತು ತೆಗೆದು ಹಾಕುವ ನಿರ್ಧಾರವನ್ನು ಸೂಪರಿಂಡೆಂಟರಿಗೆ ವರ್ಗಾಯಿಸಿದನು. ಹೀಗೆ ಕಮೀಷನರಿಗಿಂತ ಜಿಲ್ಲೆಯ ಕೆಲಸವನ್ನು ನಿಯಂತ್ರಿಸಲು ಉತ್ತಮ ಸ್ಥಾನವನ್ನು ನೀಡಲಾಯಿತು. ಪೊಲೀಸ್ ನೇಮಕಾತಿಯಲ್ಲಿಯೂ ಹಲವಾರು ಸಮಸ್ಯೆಗಳಿದ್ದವು. 1838 ರಲ್ಲಿ ಅವರ ವೇತನದ ಪರಿಷ್ಕರಣೆಯನ್ನು ಪ್ರಸ್ತಾಪಿಸಲಾಯಿತದ್ದಾರೂ ಅದು ಎಂದಿಗೂ ಜಾರಿಗೆ ಬರಲಿಲ್ಲ. 1866ಕ್ಕೆ ಮುನ್ನ ಇದ್ದಂತಹ ಪೊಲೀಸ್ ವ್ಯವಸ್ಥೆಯನ್ನು ಆಧುನೀಕರಣಗೊಳಿಸಲು ಮತ್ತೊಂದು ಬಾರಿ ಪ್ರಯತ್ನಗಳು ನಡೆದವು. ದಿವಾನ್ ಪೂರ್ಣಯ್ಯನವರ ಕಂದಚಾರದ ಪೊಲೀಸ್ ವ್ಯವಸ್ಥೆಯಿಂದ ಮಾರ್ಕ್‌ಕಬ್ಬನ್ನನ ಸೂಚನೆಗಳು ಹೇಗೆ ಸಾಕಷ್ಟು ಪರಿಣಾಮಕಾರಿಯಾಗಿ ಪೊಲೀಸ್ ವ್ಯವಸ್ಥೆಯು ಅಭಿವೃದ್ಧಿ ಹೊಂದಿತ್ತು.

ಹೀಗೆ ಕೆ.ಎನ್.ವೆಂಕಟಸುಬ್ಬಶಾಸ್ತ್ರೀಯವರು ಸಾಕಷ್ಟು ವಿಚಾರಗಳನ್ನು, ತಮ್ಮ ಈ ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಮೈಸೂರು ಸಂಸ್ಥಾನದ ಅಧ್ಯಯನ ಮಾಡುವ ಅದರಲ್ಲೂ ಕಮೀಷನರ್ ಬಗ್ಗೆ ತಿಳಿದುಕೊಳ್ಳಬೇಕಾಗಿರುವುದರಿಂದ ಇವರ ಬರವಣಿಗೆಯನ್ನು ನೋಡಲೇಬೇಕಾಗುತ್ತದೆ. ಇಲ್ಲಿ ಅವರ 2ನೇ ಅಧ್ಯಾಯದ 'solutions' ನಲ್ಲಿ ಕಂಡುಬರುವ ಪೊಲೀಸ್ ವ್ಯವಸ್ಥೆ ಬಗ್ಗೆ ಚರ್ಚಿಸಲಾಗಿದೆ.

ಶಸ್ತ್ರಜ್ಜಿತ ಕಾಲಾಳು (penρ), ಪೊಲೀಸ್ ಕರ್ತವ್ಯಗಳು, ಸೂಪರಿಟೆಂಡೆಂಟ್ ಅಧಿಕಾರ, ಕರ್ತವ್ಯಗಳು ಮುಂತಾದ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟಂತಹ ಬಂದಿರುವ ಕೃತಿಗಳಲ್ಲಿ ಇದು ಮೇಲ್ಪಂಕ್ತಿಯಲ್ಲಿ ನಿಲ್ಲುತ್ತದೆ ಎಂಬುದರಲ್ಲಿ ಯಾವುದೇ ರೀತಿಯ ಅನುಮಾನ ಇಲ್ಲ. ಅದರಲ್ಲೂ ಕಮೀಷನರ್ ಆಡಳಿತಕ್ಕೆ ಸಂಬಂಧಪಟ್ಟಿರುವ ಮಾರ್ಕ್‌ಕಬ್ಬನ್ನನ ಆಡಳಿತದ ಬಗ್ಗೆ ಸಾಕಷ್ಟು ವಿಚಾರಗಳನ್ನು ತಮ್ಮ ಬರವಣಿಗೆಯಲ್ಲಿ ತಿಳಿಸಿರುವಂತಹದ್ದನ್ನು ನಾವು ಈ ಗ್ರಂಥದಿಂದ ಮನನ ಮಾಡಿದಾಗ ಗೊತ್ತಾಗುತ್ತದೆ.ಮೈಸೂರು ಸಂಸ್ಥಾನದ ಬಗ್ಗೆ ತಿಳಿದುಕೊಳ್ಳುವ/ಅಧ್ಯಯನ ಮಾಡುವ ಆಸಕ್ತರು ಈ ಗ್ರಂಥದಲ್ಲಿ ಕಂಡುಬರುವ ಪ್ರತಿಯೊಂದು ಭಾಗವನ್ನು ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ.

**ಅಡಿಟಿಪ್ಪಣಿಗಳು**

[1] ಎಂ.ಶಾಮರಾವ್ – ಮೈಸೂರು ಸಂಸ್ಥಾನದ ಚರಿತ್ರಸಾರ ಗವರ್ನಮೆಂಟ್ ಪ್ರೆಸ್ ಬೆಂಗಳೂರು 1906 ಪುಟ 81.

[2] ಕೆ.ಎನ್.ವಿ.ಶಾಸ್ತ್ರೀ – ದ ಆಡ್ಮಿನಿಸ್ಟ್ರೇಷನ್ ಆರ್ಫ ಮೈಸೂರು ಅಂಡರ್ ಸರ್ ಮಾರ್ಕ್‌ಕಬ್ಬನ್ (1834–1861) ಲಂಡನ್ 1932 ಪುಟ–38.

[3] ಕೆ.ಎನ್.ವಿ.ಶಾಸ್ತ್ರೀ – ದ ಆಡ್ಮಿನಿಸ್ಟ್ರೇಷನ್ ಆರ್ಫ ಮೈಸೂರು ಅಂಡರ್ ಸರ್ ಮಾರ್ಕ್‌ಕಬ್ಬನ್ (1834–1861) ಲಂಡನ್ 1932 ಪುಟ–38.

[4] ಕೆ.ಎನ್. ವೆಂಕಟಸುಬ್ಬ ಶಾಸ್ತ್ರೀ – ಪೂರ್ವೋಕ್ತ ಪುಟ–39.

[5] ಕೆ.ಎನ್. ವೆಂಕಟಸುಬ್ಬ ಶಾಸ್ತ್ರೀ – ಪೂರ್ವೋಕ್ತ ಪುಟ–39.

[6] ಸೆಲಕ್ಷನ್ ಫ್ರಂ ದಿ ಓಲ್ಡ್ ರೆಕಾರ್ಡ್ಸ್ ಆಫ್ ದಿ ಮೈಸೂರು ಗವರ್ನಮೆಂಟ್ 1832–1867 ಪುಟ–68.

[7] ಕೆ.ಎನ್. ವೆಂಕಟಸುಬ್ಬಶಾಸ್ತ್ರೀ – ಪೂರ್ವೋಕ್ತ ಪುಟ–40.

[8] ಕೆ.ಎನ್. ವೆಂಕಟಸುಬ್ಬಶಾಸ್ತ್ರೀ – ಪೂರ್ವೋಕ್ತ ಪುಟ–40.

[9] ಕೆ.ಎನ್. ವೆಂಕಟಸುಬ್ಬಶಾಸ್ತ್ರೀ – ಪೂರ್ವೋಕ್ತ ಪುಟ–45.

[10] ಕೆ.ಎನ್. ವೆಂಕಟಸುಬ್ಬಶಾಸ್ತ್ರೀ – ಪೂರ್ವೋಕ್ತ ಪುಟ–45.

[11] **ಕೆ.**ಎನ್. ವೆಂಕಟಸುಬ್ಬಶಾಸ್ತ್ರೀ – ಪೂರ್ವೋಕ್ತ ಪುಟ–46.

**ಪರಾಮರ್ಶನ ಗ್ರಂಥಗಳು**


1. ದಿವಾಕರ್. ಆರ್. ಆರ್– ಕರ್ನಾಟಕ ಥ್ರೂ ದಿ ಎಜಸ್ ಬೆಂಗಳೂರು–1968
2. ಎಂ.ಶಾಮರಾವ್– ಮಾಡ್ರರ್ನ್ ಮೈಸೂರು ಸಂಪುಟ–1, ಬೆಂಗಳೂರು–1936
3. ಎಂ. ಶಾಮರಾವ್ –ಟೆನ್ ಇಯರ್ಸ್ ನೇಟಿವ್ ರೂಲ್ ಇನ್ ಮೈಸೂರು, ಮದ್ರಾಸ್–1891
4. ಕರ್ನಾಟಕ ಚರಿತ್ರೆ – ಸಂಪುಟ–6, ಪ್ರಸರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–1997
5. ಎಂ.ಕೆ.ವರದರಾಜನ್–ಎಲ್.ಬಿ.ಬೌರಿಂಗ್ ಅಂಡ್ ದ ಮೈಸೂರು ರೆಂಡೀಷನ್,ಬೆಂಗಳೂರು,1935
6. ಡಾ. ಅಶ್ವತ್ಥನಾರಾಯಣ– ಮೈಸೂರು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳುವಳಿಯ ಒಳನೋಟಗಳು 1870–1940. ಮಾದಾರ ಹೂಳಯ್ಯ ಪ್ರಕಾಶನ–2008
7. ಶ್ರೀ ಮನ್ಮಹಾರಾಜರವರ ವಂಶಾವಳಿ ಭಾಗ ಗವರ್ನಮೆಂಟ್ ಬ್ರಾಂಚ್ ಪ್ರೆಸ್,ಬೆಂಗಳೂರು–1922

8. ಡಾ॥ ಆರ್. ಗೋಪಾಲ್, ಮತ್ತು ಡಾ॥ ಎಸ್. ನರಾಂದ್ರ ಪ್ರಸಾದ್– ಮುಮ್ಮಡಿ ಕೃಷ್ಣರಾಜ ಒಡೆಯರು ಒಂದು ಚಾರಿತ್ರಿಕ ಅಧ್ಯಯನ (ಕ್ರಿ.ಶ. 1799–1868ರ ವರೆಗೆ) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ನಿರ್ದೇಶನಾಲಯ ಹೊಸಪೇಟೆ.

**9**. ಗೋಪಾಲ್,ಎಂ.ಹೆಚ್–"ದಿ ಫೈನಾನ್ಸ್ ಆಫ್ ದಿ ಮೈಸೂರು ಸ್ಟೇಟ್(1799–1831)ಮೈಸೂರು, 1960.

**10**. ಎ.ಎನ್. ನಿರಂಜನರಾಜ ಅರಸು– ಮುಮ್ಮಡಿ ಶ್ರೀ ಕೃಷ್ಣರಾಜ ಮಹೀಪಾಲ ವಂಶರತ್ನಾಕರ ಮೈಸೂರು 1993.

**11**. ಡಾ॥ ಡಿ.ಸಿ. ರಾಜಪ್ಪ– ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು (1800–1881) ಅಕ್ಷರ ಪ್ರಕಾಶನ–1995.

.